ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

E-Mail: prydirector.edu.sgkar@nic.in

**ಸಂಖ್ಯೆ : ಸಿ7(8)ಪ್ರಾಶಿಅ/ಆರ್.ಟಿ.ಇ/ದಾಖಲಾತಿ/2017-18** **ದಿನಾಂಕ : 20.07.2017**

: : ಜ್ಞಾಪನ : :

ವಿಷಯ: 2017-18ನೇ ಸಾಲಿನಲ್ಲಿ ಆರ್.ಟಿ.ಇ ಅಡಿ 1, 2 ಮತ್ತು 3ನೇ ಸುತ್ತಿನಲ್ಲಿ ಹಂಚಿಕೆಯಾದ ವಿದ್ಯಾರ್ಥಿಗಳ ದಾಖಲಾತಿ ಅಪ್‌ಡೇಟ್ ಮಾಡಲು ಪತ್ರಗಳನ್ನು ಕಳುಹಿಸುತ್ತಿರುವ ಬಗ್ಗೆ.

ಉಲ್ಲೇಖ: ಉಪನಿರ್ದೇಶಕರು(ಆಡಳಿತ) / ಕ್ಷೇತ್ರ ಶಿಕ್ಷಣಾಧಿಕಾರಿಗಳ ಪತ್ರಗಳು/ ಇ-ಮೇಲ್ ಪತ್ರಗಳು.

* * * * *

2017-18ನೇ ಸಾಲಿನಲ್ಲಿ ಒಂದು, ಎರಡು ಮತ್ತು ಮೂರನೇ ಸುತ್ತಿನಲ್ಲಿ ಆನ್‌ಲೈನ್ ಮೂಲಕ ಸೀಟು ಹಂಚಿಕೆ ಮಾಡಿ, ಆನ್‌ಲೈನ್ ಮೂಲಕ ದಾಖಲಾತಿಗೆ ಕಾಲಾವಕಾಶವನ್ನು ಸಹಾ ನಿಗಧಿಪಡಿಸಲಾಗಿತ್ತು. ಆದರೆ ಒಂದು, ಎರಡು ಮತ್ತು ಮೂರನೇ ಸುತ್ತಿನಲ್ಲಿ ಆರ್.ಟಿ.ಇ ಅಡಿ ಹಂಚಿಕೆಯಾದ ವಿದ್ಯಾರ್ಥಿಗಳ ದಾಖಲಾತಿಯನ್ನು ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡುವ ಬಗ್ಗೆ ವಿವಿದ ಕಾರಣಗಳನ್ನು ನೀಡಿ ಇದುವರೆವಿಗೂ ಪತ್ರಗಳನ್ನು ಸಲ್ಲಿಸಲಾಗುತ್ತಿದೆ.

ಸೀಟು ಹಂಚಿಕೆಯಾದ ನಂತರದಲ್ಲಿ ದಾಖಲಾತಿಗೆ ಕಾಲಾವಕಾಶ ನೀಡಿದ್ದರೂ ಸಹಾ ಈ ಸಮಯದಲ್ಲಿ ತಮ್ಮ ವ್ಯಾಪ್ತಿಯಲ್ಲಿ ಮೇಲ್ವಿಚಾರಣೆ ಮಾಡದೇ ಇರುವುದರಿಂದ ಒಂದು ಮತ್ತು ಎರಡನೇ ಸುತ್ತಿನಲ್ಲಿ ದಾಖಲಾತಿಯಾದ ವಿದ್ಯಾರ್ಥಿಗಳ ದಾಖಲಾತಿಯನ್ನು ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡದೇ ಇರುವುದರಿಂದ ಮೂರನೇ ಸುತ್ತಿನಲ್ಲಿ ಅಂತಹ ಶಾಲೆಗಳಿಗೆ ಹೆಚ್ಚುವರಿ ಸೀಟುಗಳು ಹಂಚಿಕೆಯಾಗಿರುತ್ತವೆ.

ಈ ಮೂಲಕ ಎಲ್ಲಾ ಅಲ್ಪಸಂಖ್ಯಾತವಲ್ಲದ ಅನುದಾನರಹಿತ ರಹಿತ ಶಾಲೆಗಳಿಗೆ ತಿಳಿಯಪಡಿಸುವುದೇನೆಂದರೆ ಆರ್.ಟಿ.ಇ ಅಡಿ ದಾಖಲಾದ ಪ್ರತಿ ಮಗುವಿನ ಮಾಹಿತಿಯನ್ನು ತಂತ್ರಾಂಶದಲ್ಲಿ ನಿಗಧಿತ ಸಮಯದಲ್ಲಿ ಅಪ್‌ಡೇಟ್ ಮಾಡದೇ ಹೆಚ್ಚುವರಿ ಸೀಟುಗಳ ಹಂಚಿಕೆಯಲ್ಲಿ ಶಾಲಾ ಮುಖ್ಯಸ್ಥರು ಹಾಗೂ ಆಡಳಿತ ಮಂಡಳಿ ಜವಾಬ್ದಾರರು ಹಾಗೂ ಹೆಚ್ಚುವರಿ ಸೀಟು ಹಂಚಿಕೆಯಾದ ಮಕ್ಕಳಿಗೆ ಸರ್ಕಾರದಿಂದ ಶುಲ್ಕ ಮರುಪಾವತಿ ಮಾಡಲಾಗುವುದಿಲ್ಲ.

ಸಮಸ್ಯೆಗಳಿದ್ದಲ್ಲಿ, ಅಗತ್ಯ ದಾಖಲೆಗಳೊಂದಿಗೆ ವಿವರವಾದ ವರದಿಯನ್ನು ನೇರವಾಗಿ ಇ-ಮೇಲ್ ವಿಳಾಸ: rtektk@gmail.com ಗೆ ಕಳುಹಿಸಿ ಸಲ್ಲಿಸಿ ಇತ್ಯರ್ಥಪಡಿಸಿಕೊಳ್ಳುವುದು.

ಈಗಾಗಲೇ ಶಾಲಾ ಆಡಳಿತ ಮಂಡಳಿಗಳು ಆರ್.ಟಿ.ಇ ಅಡಿ ಯಾವುದಾದರೂ ದಾಖಲಾತಿಯನ್ನು ತಂತ್ರಾಂಶದ ಮೂಲಕ ಅಪ್‌ಲೋಡ್ ಮಾಡಲು ಲಿಖಿತ ಮನವಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸಿದ್ದು, ಬಾಕಿ ಇದ್ದಲ್ಲಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಂತಹ ಎಲ್ಲಾ ಮನವಿಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಿ ಈ ಕೆಳಕಾಣಿಸಿದ ನಮೂನೆಯಲ್ಲಿ ಮಾಹಿತಿಯನ್ನು ದಾಖಲೆಗಳೊಂದಿಗೆ ವಿವರವಾದ ವರದಿಯನ್ನು ನೇರವಾಗಿ ದಿನಾಂಕ: 22.07.2017 ರಂದು 2.30 ರೊಳಗಾಗಿ ಇ-ಮೇಲ್ ವಿಳಾಸ: rtektk@gmail.com ಗೆ ಕಳುಹಿಸಿ ಇತ್ಯರ್ಥಪಡಿಸಿಕೊಳ್ಳುವುದು. ತದನಂತರ ಸ್ವೀಕರಿಸಿದ ಮನವಿಗಳನ್ನು ತಿರಸ್ಕರಿಸಲಾಗುವುದು.

| ಕ್ರಸಂ | ಶಾಲೆಯ ಹೆಸರು | ನಿಗಧಿಪಡಿಸಿದ ಸೀಟುಗಳ ಸಂಖ್ಯೆ | ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ | ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡಿದ ಸೀಟುಗಳ ಸಂಖ್ಯೆ | ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡಲು ಬಾಕಿ ಇರುವ ಸೀಟುಗಳ ಸಂಖ್ಯೆ | ಉಳಿಕೆ ಸೀಟುಗಳ ಸಂಖ್ಯೆ |
|---|---|---|---|---|---|---|
| | | | | | | |

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)(ಹೆ.ಪ್ರ))

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ), ಇವರುಗಳಿಗೆ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
3. ರಾಜ್ಯದ ಎಲ್ಲಾ ಅಲ್ಪಸಂಖ್ಯಾತವಲ್ಲದ ಅನುದಾನರಹಿತ ಶಾಲೆಗಳಿಗೆ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಸೂಕ್ತ ಕ್ರಮಕ್ಕಾಗಿ.
4. ಕಚೇರಿ ಪ್ರತಿ.